ರೂಪಾಯಿನ ಭೂಕಂದಾಯದ ಸೂಟನ್ನು ಬಿಟ್ಟಿದ್ದೇವೆಂದು. ನೀರಿನ ಮೇಲಿನ ತೆರಿಗೆ ಯಾವ ರೀತಿ ವಸೂಲಾಗುತ್ತಿಲ್ಲವೋ. ಅದೇ ರೀತಿ ಭೂ ಕಂದಾಯ ಕೂಡ ವಸೂಲಾಗುತ್ತಿಲ್ಲ. ಕಳೆದ 3 ವರ್ಷಗಳಿಂದ ರೈತರ ಚಳುವಳಿ ನಡೆಯುತ್ತಿದೆ. ಈ ವಿಚಾರದಲ್ಲಿ ರೈತರ ಬೇಡಿಕೆಗಳು ಇವೆ. ಒಂದೇ ತರಹ ಕಂದಾಯವನ್ನು ಎಲ್ಲದಕ್ಕೂ ಅಂದರೆ ಭೂಮಿಯ ಮೇಲೆ, ಸಣ್ಣ ಪುಟ್ಟ ಕೆರೆಗಳ ನೀರನ್ನು ಬಳಸುವುದಕ್ಕೆ ವಸೂಲ್ಮಾಡ ತಕ್ಕ ವಿಚಾರ ಬಂತು. ಒಂದೇ ರೀತಿ ಕಂದಾಯ ವಸೂಲ್ಮಾಡುವ ವಿಚಾರದ ಬಗೆ ಕ್ಯಾಬಿನೆಟ್ ಸಬ್ ಕಮಿಟಿ ಮಾಡಿದ್ದೇವೆ. ಅದರ ವರದಿ ಬಂದಮೇಲೆ ತೆರಿಗೆ ವಸೂಲ್ಮಾಡುವ ಬಗ್ಗೆ ಕ್ರಮ ಕೈಗೊಳ್ಳುತ್ತೇವೆ.

ಶ್ರೀ ಬಿ. ಬಿ. ಬಣಕಾರ್.--ಮಾರಾಟ ತೆರಿಗೆ 60 ಕೋಟಿ ವಸೂಲ್ಮಾಡಬೇಕೆಂದು ಇದೆ. ಇದು ಎಷ್ಟು ವರ್ಷದಿಂದ ಇದೆ ? ಇದನ್ನು ಹೇಗೆ ವಸೂಲ್ಮಾಡುತ್ತೀರಿ ?

ಶ್ರೀ ರಾಮಕೃಷ್ಣ ಹೆಗ್ಡೆ.-- ಮಾರಾಟ ತೆರಿಗೆ ಮೇಲೆ ಅದಕ್ಕೆ ಸಂಬಂಧಪಟ್ಟಂತೆ ಬಾಕಿ ಇರುವುದರ ಮೇಲೆ ಹೈಕೋರ್ಟಿನಲ್ಲಿ ರಿಟ್ ಪಿಟಿಷನ್ ಇರುವುದರಿಂದ ಅದನ್ನು ವಸೂಲ್ಮಾಡುವುದಕ್ಕಾಗಿಲ್ಲ ಅದರ ಮೇಲೆ ಸ್ಟೇ ಆರ್ಡರ್ ಕೊಟ್ಟಿದ್ದಾರೆ. ಬಹುಶಃ ಅದಕ್ಕೆ ಸಂಬಂಧಿಸಿದಂತೆ 30 ಕೋಟಿ ರೂಪಾಯಿಗಳಷ್ಟು ಇದೆ ಎಂದು ಕಾಣುತ್ತದೆ. ಬಾಕಿ ಇದ್ದುದ್ದು ಡಿಕ್ರಿ ಇದೆ. ಅದನ್ನು ವಸೂಲ್ಮಾಡುವುದಕ್ಕೆ ಕ್ರಮ ಕೈಗೊಳ್ಳುತ್ತೇವೆ.

ಮೂಡಿಗೆರೆ ಕ್ಷೇತ್ರದ ಗ್ರಾಮೀಣ ಆಸ್ಪತ್ರೆಯಲ್ಲಿ ಔಷಧಿ ಕೊರತೆ

260 (735) ಶ್ರೀ. ಪಿ. ತಿಪ್ಪಯ್ಯ (ಮೂಡಿಗೆರೆ)..ಮಾನ್ಯ ಆರೋಗ್ಯ ಹಾಗೂ ಕುಟುಂಬ ಕಲ್ಯಾಣ ರಾಜ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ;

ಅ) ಮೂಡಿಗೆರೆ ಕ್ಷೇತ್ರದ ಗ್ರಾಮೀಣ ಆಸ್ಪತ್ರೆಗಳಲ್ಲಿ ಔಷಧಿ ಇಲ್ಲದೆ ಜನತೆಗೆ ಅತೀವ ತೊಂದರೆಯಾಗಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೆ :

ಆ) ಹಾಗಿದ್ದಲ್ಲಿ ಈ ಬಗ್ಗೆ ಸರ್ಕಾರದವರು ಕೈಗೊಂಡ ಕ್ರಮವೇನು ?

ಶ್ರೀ ಪಿ. ಜಿ ಆರ್. ಸಿಂಧ್ಯ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ರಾಜ್ಯ ಸಚಿವರು).—

ಅ) ಇಲ್ಲ

ಆ) ಉದ್ಭವಿಸುವುದಿಲ್ಲ.

ಶ್ರೀ ಪಿ ತಿಪ್ಪಯ್ಯ --ಮಾನ್ಯ ಸಚಿವರು ನನ್ನು ಮಲೆನಾಡಿನ ಭಾಗಗಳಿಗೆ ಭೇಟಿ ಕೊಟ್ಟು ಅಲ್ಲಿನ ಆಸ್ಪತ್ರೆಗಳ ಪರಿಸ್ಥಿತಿಗಳನ್ನು ಪರಾಂಬರಿಸಿದ್ದಾರೆ ಗ್ರಾಮಾಂತರ ಪ್ರದೇಶಗಳಲ್ಲಿ ಆಸ್ಪತ್ರೆಗಳಲ್ಲಿ ಔಷಧಿಗಳ ಕೊರತೆ ಇರುವುದು ಗೊತ್ತಿದೆ. ಈ ಸಂದರ್ಭದಲ್ಲಿ ನಾನು ಮೂಡಿಗೆರೆ ಕ್ಷೇತ್ರಕ್ಕೆ ಸಂಬಂಧಪಟ್ಟ ಹಾಗೆ ವಿಚಾರವನ್ನು ಸಚಿವರ ಗಮನಕ್ಕೆ ತಂದಿದ್ದೇನೆ. ಇದರ ಬಗ್ಗೆ ಗಮನ ಹರಿಸಿ ಅಲ್ಲಿನ ಸರ್ಕಾರಿ ಆಸ್ಪತ್ರೆಗಳಿಗೆ ಬರತಕ್ಕ ರೋಗಿಗಳಿಗೆ ಆಗತ್ಯವಾದ ಔಷಧಿಗಳನ್ನು ಒದಗಿಸತಕ್ಕ ವ್ಯವಸ್ಥೆ ಮಾಡಿಕೊಡುತ್ತೀರಾ ?

ಶ್ರೀ ಪಿ. ಜಿ. ಆರ್ ಸಿಂಧ್ಯ -- ಮಾನ್ಯ ಸದಸ್ಯರು ಮೂಡಿಗೆರೆ ಕ್ಷೇತ್ರ ಗಾಮೀಣ ಆಸ್ಪತ್ರೆಗಳಲ್ಲಿ ಔಷದಿಗಳ ಕೊರದೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ಎಂದು ಕೇಳಿದ್ದಾರೆ. ಅದು ನಮ್ಮ ಗಮನಕ್ಕೆ ಬಂದಿಲ್ಲ ನಮ್ಮ ಗಮನಕ್ಕೆ ತಂದಿದ್ದರೆ ಆಗಲೇ ವ್ಯವಸ್ಥೆ ಮಾಡುತ್ತಿದ್ದೆ. ಕೆಲವು ಗ್ರಾಮಾಂತರ ಪ್ರದೇಶಗಳಲ್ಲಿ ಔಷಧಿ ಕೊರತೆ ಇರುವುದನ್ನು ಒಪ್ಪುತ್ತೇನೆ ಇದಕ್ಕೆ ಎರಡು ಕಾರಣಗಳು ಇವೆ ಒಂದನೆಯದು ಸರ್ಕಾರದಿಂದ ಔಷಧಿ ಪ್ರಮಾಣವನ್ನು ಕಡಿಮೆ ಕೊಡತಕ್ಕದ್ದು. ಎರಡನೆಯದು ವಿತರಣಾ ವ್ಯವಸ್ಥೆ ಸರಿಯಾಗಿಲ್ಲದಿರುವುದು. ಆ ಪ್ರಮಾಣವನ್ನು ಹೆಚ್ಚು ಮಾಡಬೆಕೆಂದು ಈ ಸಾರಿ ಬಡ್ಜೆಟ್ಟಿನಲ್ಲಿ ಸುಮಾರು ಕೋಟಿ ರೂಪಾಯಿಗಳನ್ನು ಹೆಚ್ಚು ಮಾಡಿದ್ದೇವೆ. ಜೊತೆಗೆ ವಿತರಣಾ ವ್ಯವಸ್ಥೆಯ ಸಲುವಾಗಿ 4-5 ಜಿಲ್ಲೆಗೆ ಒಂದರಂತೆ ಡಿವಿಜನ್‌ಗಳನ್ನು ಮಾಡಿ ಅಲ್ಲಲ್ಲಿ ಸರ್ಕಾರೀ ಮೆಡಿಕಲ್ ಸ್ಟೋರ್‌ಗಳನ್ನು ತೆರೆದು ವಿಕೇಂದ್ರೀಕರಣ ಮಾಡಬೇಕೆಂದು ಕ್ರಮ ತೆಗೆದುಕೊಂಡಿದ್ದೇವೆ. ಸ್ವಲ್ಪ ಸಮಯದಲ್ಲಿಸಮಸ್ಯೆ ಸುಧಾರಣೆ ಆಗಬಹುದೆಂದು ಅಂದು ಕೊಂಡಿದ್ದೇವೆ.

ಅಧ್ಯಕ್ಷರು.-ಇಲ್ಲಿಗೆ ಪ್ರಶ್ನೋತ್ತರಗಳು ಮುಗಿದವು.

ದಿನದ ಪಟ್ಟಿಯಲ್ಲಿ ಸೇರಿಸಲಾದ ಪ್ರಶ್ನೋತ್ತರಗಳು

ರಾಜ್ಯದಲ್ಲಿ ಸಂಭವಿಸಿದ ರಸ್ತೆ ಅಪಘಾತ, ರಸ್ತೆ ದರೋಡೆಗಳ ಬಗ್ಗೆ

251 (263) ಶ್ರೀ ಟಿ. ಪಿ. ಬೋರಯ್ಯ (ಬನ್ನೂರು) -ಮಾನ್ಯ ಮುಖ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ;